**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ.313/2020**

| | | | |
|---|---|---|---|
| **ಹೆಸರು** | : | **ಸುರೇಶ** | **ದೋ.ಸಾ. 8** |
| **ತಂದೆಯ ಹೆಸರು** | : | **ಬಾಬುರಾವ್ ಪಾಟೀಲ** | **ಪ್ರಾ.ಸಾ. 1** |
| **ವಯಸ್ಸು** | : | **40 ವರ್ಷ** | **ದಿನಾಂಕಃ 22-10-2021** |
| **ಉದ್ಯೋಗ** | : | **ಒಕ್ಕಲುತನ** | |
| **ವಾಸಸ್ಥಳ** | : | **ನರನಾಳ** | |

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿ ವಿಜಯಕುಮಾರ ನನಗೆ ಗೊತ್ತು. ಆತನ ನಮ್ಮೂರಿನವನು.

ಅದೇ ರೀತಿ ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-1, 9, 11 ರಿಂದ 13 ನನಗೆ ಗೊತ್ತು. ಚಾಸಾ-1 ನನ್ನ ತಮ್ಮ, ಚಾಸಾ-9 ನನ್ನ ತಾಯಿ, ಚಾಸಾ-11 ರಿಂದ 13 ನಮ್ಮೂರಿನವರು.

ಈ ಪ್ರಕರಣದಲ್ಲಿ ಮೃತನಾದ ಬಾಬುರಾವ್ ಪಾಟೀಲ ನನ್ನ ತಂದೆ.

ಈಗ್ಗೆ 2 ವರ್ಷಗಳ ಹಿಂದೆ ಒಂದು ದಿನ ಸಂಜೆ ಸುಮಾರು 05-30 ಗಂಟೆ ಸಮಯಕ್ಕೆ ನಾನು ಮನೆಯಲ್ಲಿದ್ದಾಗ ಅಲ್ಲಿಗೆ ಬಂದ ನಮ್ಮೂರಿನ ಜನ ನಮ್ಮ ತಂದೆ ಚಿಮ್ಮನಚೋಡಿಗೆ ಹೋಗುವ ಸಲುವಾಗಿ ಆಟೋವೊಂದರಲ್ಲಿ ಹೋಗುತ್ತಿದ್ದಾಗ ಸದರಿ ಆಟೊ ನಾಗರಾಳ ಕ್ರಾಸ್ ಬಳಿ ಬಿದ್ದಿದ್ದು ಅದರಲ್ಲಿ ಗಾಯಗೊಂಡಿರುವ ನನ್ನ ತಂದೆ ಮತ್ತಿತರರನ್ನು ಆಸ್ಪತ್ರೆಗೆ ಸೇರಿಸಲಾಗಿದೆ ಎಂದು ವಿಚಾರ ತಿಳಿಸಿದ ಮೇರೆಗೆ ನಾನು ಚಿಂಚೋಳಿ ಸರ್ಕಾರಿ ಆಸ್ಪತ್ರೆಗೆ ಬಂದು ನೋಡಲಾಗಿ ನನ್ನ ತಂದೆಯ ಮೈಕೈಗೆ ಬಹಳ ಪೆಟ್ಟಾಗಿತ್ತು. ನಂತರ ವೈದ್ಯರ ಸಲಹೆಯ ಮೇರೆಗೆ ನನ್ನ ತಂದೆಯನ್ನು ಗುಲ್ಬರ್ಗಾ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಸದರಿ ಆಸ್ಪತ್ರೆಯಲ್ಲಿ ನಮ್ಮ ತಂದೆ ತೀರಿಕೊಂಡಿರುತ್ತಾರೆ.

ಯಾರ ತಪ್ಪಿನಿಂದ ನಮ್ಮ ತಂದೆ ಪ್ರಯಾಣಿಸುತ್ತಿದ್ದ ಆಟೋ ಪಲ್ಟಿಯಾಯಿತು ಎಂದು ನನಗೆ ಗೊತ್ತಿಲ್ಲ. ಸದರಿ ಆಟೋವನ್ನು ಅಪಘಾತ ನಡೆಯುವ ಕಾಲಕ್ಕೆ ಆರೋಪಿ ಚಲಾಯಿಸುತ್ತಿದ್ದ ಎಂದು ನಮ್ಮ ಊರಿನವರು ನನಗೆ ಹೇಳಿರುತ್ತಾರೆ. ಅಪಘಾತವನ್ನು ನಾನು ಕಣ್ಣಾರೆ ಕಂಡಿರುವುದಿಲ್ಲ.

ಪೋಲೀಸರು ಈ ಪ್ರಕಣದ ಸಂಬಂಧ ನನ್ನನ್ನು ವಿಚಾರಣೆ ಮಾಡಿಲ್ಲ. ಪೋಲೀಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಕೊಟ್ಟಿರುವ ಹೇಳಿಕೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕ 12-05-2019 ರಂದು ಸಂಜೆ 05-00 ಗಂಟೆ ಸುಮಾರಿಗೆ ನನ್ನ ತಂದೆ ತಮ್ಮ ವಯಕ್ತಿಕ ಕೆಲಸ ನಿಮಿತ್ಯ ಚಿಮ್ಮನಚೋಡ ಗ್ರಾಮಕ್ಕೆ ಹೋಗಿದ್ದರು ಎನ್ನುವುದು ಸರಿ. ಸದರಿ ದಿನ ಸಂಜೆ 05-45 ಗಂಟೆಗೆ ನನ್ನ ತಮ್ಮ ಚಾಸಾ-1 ರವರು ನನಗೆ ಫೋನ್ ಮಾಡಿ ಆರೋಪಿ ಚಲಾಯಿಸುತ್ತಿದ್ದ ಆಟೋ ರೋಹಿಲ್ಯಾ ತಾಂಡಾದ ಕ್ರಾಸ್ ಹತ್ತಿರ ಚಿಮ್ಮನಚೋಡ ರಸ್ತೆಯ ಎಡಭಾಗಕ್ಕೆ ಪಲ್ಟಿಯಾಗಿ ಬಿದ್ದು ಅದರಲ್ಲಿದ್ದ ನನ್ನ ತಂದೆ ಮತ್ತಿತರರಿಗೂ ಗಾಯಾಗಳಾಯಿತು ಎಂದು ಊರಿನ ಜನರು ಮಾತನಾಡುತ್ತಿದ್ದಾರೆ ಅಂತಾ ನನಗೆ ಹೇಳಿದನು ಎಂದರೆ ಸರಿ.ಆಗ ನಾನು ಮತ್ತು ನನ್ನ ತಾಯಿ ಚಾಸಾ-9 ರವರು ಘಟನಾ ಸ್ಥಳಕ್ಕೆ ಹೋಗಿ ನೋಡಲಾಗಿ ರೋಹಿಲ್ಯಾ ತಾಂಡಾದ ಕ್ರಾಸ್ ಹತ್ತಿರ ನರನಾಳದಿಂದ ಚಿಮ್ಮನಚೋಡ ಕಡೆಗೆ ಹೋಗುವ ರಸ್ತೆಯ ಎಡಭಾಗಕ್ಕೆ ಇರುವ ಮುಳ್ಳು ಕಂಟಿಗಳಲ್ಲಿ ಆರೋಪಿ ವಿಜಯಕುಮಾರನಿಗೆ ಸೇರಿದ ಕೆಎ-32 ಸಿ-1127 ನೇ ಆಟೋ ಪಲ್ಟಿಯಾಗಿ ಬಿದ್ದಿತ್ತು ಎಂದರೆ ಸರಿ.

ನನ್ನ ತಂದೆಗೆ ಎದೆಗೆ ಒಳಪೆಟ್ಟಾಗಿತ್ತು , ಬಲಗೈಗೆ ತರಚಿದ ಗಾಯಗಳಾಗಿತ್ತು , ಬಲಗಾಲಿನ ಹಿಮ್ಮಡಿಗೆ ರಕ್ತಗಾಯಗಳಾಗಿ ನನ್ನ ತಂದೆ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ ಮತ್ತು ಪ್ರಜ್ಞೆ ತಪ್ಪಿ ತ್ತು ಎನ್ನುವುದು ಸರಿ. ಸದರಿ ಆಟೋದಲ್ಲಿ ನಮ್ಮ ತಂದೆಯೊಂದಿಗೆ ಪ್ರಯಾಣಿಸುತ್ತಿದ್ದ ಚಾಸಾ-10 ರಿಂದ 13 ರವರಿಗೂ ಸಹ ಗಾಯಗಳಾಗಿತ್ತು ಎನ್ನುವುದು ಸರಿ.

ಚಾಸಾ-11 ರವರನ್ನು ನಾನು ವಿಚಾರಿಸಿದಾಗ, ಸದರಿಯವರು ನಮ್ಮ ತಂದೆ, ಚಾಸಾ-10, 12 ಮತ್ತು 13 ರವರು ಆರೋಪಿಗೆ ಸೇರಿದ ಆಟೋದಲ್ಲಿ ಕುಳಿತು ನರನಾಳ ಗ್ರಾಮದಿಂದ ಚಿಮ್ಮನಚೋಡಗೆ ಹೋಗುತ್ತಿದ್ದಾಗ ಸಂಜೆ 05-30 ಗಂಟೆಗೆ ರೋಹಿಲ್ಯಾ ತಾಂಡಾದ ಕ್ರಾಸ್ ಹತ್ತಿರ ಆರೋಪಿ ಆಟೋವನ್ನು ಅತೀವೇಗವಾಗಿ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಹೋಗಿದ್ದರಿಂದ ಆಟೋದ ಹಿಡಿತ ತಪ್ಪಿ ರಸ್ತೆಯ ಎಡಭಾಗದ ಮುಳ್ಳಿನ ಕಂಟಿಯೊಳಗೆ ಪಲ್ಟಿಯಾಗಿ ಬಿದ್ದು ನಮಗೆ ಗಾಯವಾಯಿತು ಎಂದು ತಿಳಿಸಿದ ಎನ್ನುವುದು ಸರಿ. ಅಂಬ್ಯುಲೆನ್ಸ್ ನಿಂದ ಗಾಯಾಳುಗಳನ್ನು ಚಿಂಚೋಳಿ ಆಸ್ಪತ್ರೆಗೆ ಕರೆತರಲಾಗಿತ್ತು ಎನ್ನುವುದು ಸರಿ.

ಮೇಲ್ಕಂಡ ವಿಷಯಗಳನ್ನು ದಿನಾಂಕ 14-05-2019 ರಂದು ಪೋಲೀಸರ ಮುಂದೆ ನಾನು ಕೊಟ್ಟ ನನ್ನ ಹೇಳಿಕೆಯಲ್ಲಿ ಹೇಳಿದ್ದೇನೆ ಎನ್ನುವುದು ಸರಿ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಜೆ.ಹೆಚ್.ಜಿ. ವಕೀಲರಿಂದಃ**

ಚಿಮ್ಮನಚೋಡ ಗ್ರಾಮದಿಂದ ನರನಾಳಗೆ ಹೋಗುವ ರಸ್ತೆ 2019 ನೇ ಇಸವಿಯಲ್ಲಿ ಹದಗೆಟ್ಟಿತ್ತು ಎನ್ನುವುದು ಸರಿಯಲ್ಲ. ಸದರಿ ರಸ್ತೆಯಲ್ಲಿ ಎಲ್ಲಾ ವಾಹನಗಳು ನಿಧಾನಕ್ಕೆ ಚಲಿಸಬೇಕಾಗಿತ್ತು ಎನ್ನುವುದು ಸರಿಯಲ್ಲ. ಅಪಘಾತ ನಡೆಯಿತು ಎನ್ನಲಾದ ಸ್ಥಳದಲ್ಲಿ ಉಬ್ಬು ತಗ್ಗುಗಳಿರುವುದರಿಂದ ಅಲ್ಲಿ ವಾಹನಗಳು ಸಾಮಾನ್ಯವಾಗಿ ನಿಧಾನಕ್ಕೆ ಚಲಿಸುತ್ತವೆ ಎನ್ನುವುದು ಸರಿಯಲ್ಲ.

ಅಪಘಾತ ಯಾವ ರೀತಿ ಆಯಿತು ಎಂಬ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎನ್ನುವುದು ಸರಿ. ನಮ್ಮ ಊರಿನವರು ಮತ್ತು ಗಾಯಾಳುಗಳು ಹೇಳಿದ ಮೇರೆಗೆ ನಾನು ಅಪಘಾತ ಆರೋಪಿ ಚಲಾಯಿಸುತ್ತಿದ್ದ ಆಟೋದಿಂದ ಆಯಿತು ಎಂದು ಹೇಳುತ್ತಿದ್ದೇನೆ ಎನ್ನುವುದು ಸರಿ. ಆರೋಪಿಗೂ ಈ ಪ್ರಕರಣದಲ್ಲಿ ನಡೆದಿದೆ ಎನ್ನಲಾದ

ಅಪಘಾತಕ್ಕೂ ಸಂಬಂಧ ಇಲ್ಲ ಎಂದರೆ ಸಾಕ್ಷಿ ಅಪಘಾತವಾದ ಆಟೋವನ್ನು ಆರೋಪಿಯೇ ಚಲಾಯಿಸುತ್ತಿದ್ದ ಎನ್ನುತ್ತಾರೆ. ಆರೋಪಿ ಅಪಘಾತಕ್ಕೊಳಗಾದ ಆಟೋವನ್ನು ಚಲಾಯಿಸುತ್ತಿದ್ದುದನ್ನು ನಾನು ನೋಡಿಲ್ಲ . ಸಾಕ್ಷಿ ಸ್ವ-ಇಚ್ಛೆಯಿಂದ ಅಪಘಾತವಾಗಿ 20 ನಿಮಿಷ ಆಗಿತ್ತು ಎನ್ನುತ್ತಾರೆ.

ಅಪಘಾತ ಯಾರ ತಪ್ಪಿ ನಿಂದ ಆಗಿತ್ತು ಎಂದು ನನಗೆ ಗೊತ್ತಿಲ್ಲ ಎನ್ನುವುದು ಸರಿ. ಅಪಘಾತಕ್ಕೊಳಗಾದ ಆಟೋದ ನೊಂದಣಿ ಸಂಖ್ಯೆ ನನಗೆ ಗೊತ್ತಿಲ್ಲ. ಅಪಘಾತವಾದ 15 ದಿನಗಳ ನಂತರ ಪೋಲೀಸರು ನಮ್ಮ ಮನೆಗೆ ಬಂದಿದ್ದರು. ಆಗ ಪೋಲೀಸರಿಗೆ ನನ್ನ ಹೇಳಿಕೆ ಕೊಟ್ಟಿದ್ದೆ. ಪೋಲೀಸರ ಮುಂದೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪೋಲೀಸರು ನಾನು ಹೇಳಿಕೆಯನ್ನು ನನಗೆ ಓದಿ ಹೇಳಿಲ್ಲ. ಪೋಲೀಸರು ಏನು ಬರೆದುಕೊಂಡರು ಎನ್ನುವುದು ನನಗೆ ಗೊತ್ತಿಲ್ಲ ಎನ್ನುವುದು ಸರಿ.

ಈ ಪ್ರಕರಣದ ಬಗ್ಗೆ ನನಗೇನೂ ಗೊತ್ತಿಲ್ಲ ಎನ್ನುವುದು ಸರಿ. ನನ್ನ ತಂದೆ ಅಪಘಾತದಲ್ಲಿ ತೀರಿಕೊಂಡಿದ್ದಕ್ಕೆ ವಿಮಾ ಪರಿಹಾರದ ಹಣವನ್ನು ಪಡೆಯುವ ಸಲುವಾಗಿ ನಾನು ಮತ್ತು ನನ್ನ ಸಹೋದರರು ಈ ಕೇಸು ದಾಖಲಿಸಿದ್ದೇವೆ ಎನ್ನುವುದು ಸರಿ. ಪೋಲೀಸರು ಹೇಳಿಕೊಟ್ಟಂತೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲದೇ ಇದ್ದರೂ ಸಹ ಆರೋಪಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**